8	Mysore Lamp works Limited, Bangalore
9	Mysore Sugar company, Mandya

ಹೊಸದಾಗಿ ಪೊಲೀಸ್ ಠಾಣೆ ತೆರೆಯುವುದು

13(114); ಶ್ರೀ ಅಶೋಕ್ ಖೇಣಿ (ಬೀದರ್ ದಕ್ಷಿಣ) ವಿಧಾನ ಸಭೆ ಸದಸ್ಯರು

ಅ) ಬೀದರ ದಕ್ಷಿಣ ವಿಧಾನ ಸಭಾ ಕ್ಷೇತ್ರದಲ್ಲಿ ಹೊಸದಾಗಿ ಪೊಲೀಸ್ ಠಾಣೆ ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) 2014–15 ನೇ ಸಾಲಿನಲ್ಲಿ ಪೊಲೀಸ್ ಠಾಣೆ ಪ್ರಾರಂಭಿಸಲಾಗುವುದು;

ಇ) ಹಾಗಿದ್ದಲ್ಲಿ ಹೈದ್ರಾಬಾದ್–ಕರ್ನಾಟಕ ಪ್ರದೇಶಾಭಿವೃದ್ಧಿ ಮಾಡುವ ಕ್ರಿಯಾ ಯೋಜನೆಗೆ ಇಲಾಖೆ ವತಿಯಿಂದ ತಯಾರಿ ನಡೆದಿದೆಯೇ;

ಈ) 2014–15 ನೇ ಸಾಲಿನಲ್ಲಿ ಅನುದಾನ ಲಭ್ಯತೆ ಇದೆಯೇ (ವಿವರ ಒದಗಿಸುವುದು)?

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹ ಸಚಿವರು)

ಅ) ಪ್ರಸ್ತುತ ಬೀದರ ದಕ್ಷಿಣ ವಿಧಾನ ಸಭಾ ಕ್ಷೇತ್ರದಲ್ಲಿ ಹೊಸದಾಗಿ ಪೊಲೀಸ್ ಠಾಣೆ ತೆರೆಯುವ ಯಾವುದೆ ಪ್ರಸ್ತಾವನೆಯು ಇಲಾಖೆಯ ಪರಿಶೀಲನೆಯಲ್ಲಿರುವುದಿಲ್ಲ.

ಆ) ಅನ್ವಯಿಸುವುದಿಲ್ಲ.

ಇ) ಹೈದ್ರಾಬಾದ್–ಕರ್ನಾಟಕ ಪ್ರದೇಶದಲ್ಲಿ ಕೈಗೊಳ್ಳಲಾಗುತ್ತಿರುವ ಪೊಲೀಸ್ ವಸತಿ ಗೃಹ, ಪೊಲೀಸ್ ಠಾಣೆಗಳ ಜಿಲ್ಲಾವಾರು ಕಾಮಗಾರಿ ವಿವರವನ್ನು ಅನುಬಂಧದಲ್ಲಿ ಒದಗಿಸಿದೆ.

ಈ) ಹೈದ್ರಾಬಾದ್–ಕರ್ನಾಟಕ ಪ್ರದೇಶ ಅಭಿವೃದ್ಧಿ ಸಲುವಾಗಿ ಪೊಲೀಸ್ ಇಲಾಖೆಗೆ ಪ್ರತ್ಯೇಕವಾದ ಅನುದಾನ ನಿಗಧಿಯಾಗಿರುವುದಿಲ್ಲ.

ವಿಧಾನಸಭೆ ಸದಸ್ಯರಾದ ಶ್ರೀ ಅಶೋಖ್ ಖೇಣಿ (ಬೀದರ್ ದಕ್ಷಿಣ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 114ಕ್ಕೆ ಅನುಬಂಧ

ಹೈದರಾಬಾದ್–ಕರ್ನಾಟಕ ಭಾಗದಲ್ಲಿ ಚಾಲ್ತಿಯಲ್ಲಿರುವ ನಿರ್ಮಾಣ ಕಾಮಗಾರಿಗಳ ವಿವರ.

ಪೊಲೀಸ್ ಠಾಣೆಗಳು:

ಕ್ರ. ಸಂ	ಘಟಕ	ಪೊಲೀಸ್ ಠಾಣೆ
1	ಗುಲ್ಬರ್ಗಾ	ಕಂಪ್ಲಾಪುರ
2	ರಾಯಚೂರು	ಮಾನ್ವಿ
3	ಬೀದರ್	ಧನೂರು, ಹುಮ್ನಾಬಾದ್ ಸಂಚಾರ, ಮನ್ನಳ್ಳಿ
4	ಬಳ್ಳಾರಿ	ಕುಡುತಿನಿ, ಬ್ರೂಸ್‌ಪೇಟೆ
5	ಕೊಪ್ಪಳ	ಕೊಪ್ಪಳ ನಗರ, ತಾವರಗೇರ
6	ಯಾದಗಿರಿ	ಯಾದಗಿರಿ

ವಸತಿ ಗೃಹ:

ಕ್ರ. ಸಂ	ಘಟಕ	ಸಿಬ್ಬಂದಿ ವಸತಿ ಗೃಹ	ಅಧಿಕಾರ ವಸತಿ ಗೃಹ	ಒಟ್ಟು
1	ಗುಲ್ಬರ್ಗಾ	300	20	320
2	ರಾಯಚೂರು	216	8	224
3	ಬೀದರ್	252	10	262
4	ಬಳ್ಳಾರಿ	276	30	306
5	ಕೊಪ್ಪಳ	192	16	208
6	ಯಾದಗಿರಿ	108	14	122

(ಹೆಚ್.ಆರ್. ಪುಟ್ಟೇಗೌಡ)
ಸರ್ಕಾರದ ಆಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ, (ಪೊಲೀಸ್ ವೆಚ್ಚ)